ಊ) ಮಂಗಳೂರಿನಲ್ಲಿ ರಂಗಮಂದಿರ ನಿರ್ಮಾಣ ಎಷ್ಟು ವೆಚ್ಚದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು ಇದರಲ್ಲಿ ದಾನಿಗಳ ನೆರವು ಎಷ್ಟು ಸರ್ಕರದ ಸಹಾಯ ಎಷ್ಟು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) .

ಅ) ಹೌದು

ಸುವರ್ಣ ಸಂಸ್ಕೃತಿ ದರ್ಶಿಕೆ (ಕಲ್ಚರಲ್ ಡೈರೆಕ್ಟರಿ) ಎಂಬ ಯೋಜನೆಯ ಮೂಲಕ ಈ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ

ಆ) ಸದರಿ ಕಾರ್ಯಯೋಜನೆಯಡಿ ರಾಜ್ಯದ ಎಲ್ಲ ಕಲಾವಿದರ, ಲೇಖಕರ, ಪ್ರದರ್ಶನಾಂಗಣಗಳ ಕಲಾಸಂಸ್ಥೆಗಳ ಮಾಹಿತಿ ಸಂಗ್ರಹ ಕಾರ್ಯವನ್ನು ದಿನಾಂಕ 1/12/2003 ರಿಂದ ರಾಜ್ಯಾದ್ಯಾಂತ ಆರಂಭಿಸಲಾಗಿದೆ

ಇ) ಸದರಿ ಮಾಹಿತಿಗಳ ಸಂಗ್ರಹವನ್ನು ಪುಸ್ತಕ ಹಾಗೂ ಸಿ ಡಿ ರೂಪದಲ್ಲಿ ಹೊರತಂದ ಅಂತರಜಲತಾಣಕ್ಕೆ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಈ) ಉದ್ದೇಶಿತ ಕಾರ್ಯಕ್ಕೆ ಸರ್ಕಾರವು ರೂ 50 00 ಲಕ್ಷಗಳ ಹಣಕಾಸು ನೆರವನ್ನು ಒದಗಿಸಿದೆ ಈ ಯೋಜನೆಗೆ ಸುಮಾರು ರೂ 100 ಕೋಟಿ ಬೇಕಾಗುತ್ತದೆ

ಉ) ಈ ಬೃಹತ್ ಯೋಜನೆಯಿಂದ ಇಡೀ ರಾಜ್ಯದ ಸಾಹಿತಿ ಕಲಾವಿದರ / ಸಾಂಸ್ಕೃತಿಕ ಪರ ಸಂಘ ಸಂಸ್ಥೆಗಳ, ಪ್ರದರ್ಶನಾಂಗಣಗಳ ಸಂಪೂರ್ಣ ವಿವರಗಳು ಒಂದೇ ಕಡೆ ಲಭ್ಯವಾಗಲಿದೆ. ಇದರಿಂದ ರಾಜ್ಯದ ಸಾಂಸ್ಕೃತಿಕ ಲೋಕಕ್ಕೆ ಸಂಬಂಧಪಟ್ಟ ಸಮಗ್ರ ಮಾಹಿತಿ ಲಭ್ಯವಾಗಲಿದೆ ಅಲ್ಲದೆ ದೇಶ ವಿದೇಶಗಳಲ್ಲಿರುವ ಕನ್ನಡಿಗರಿಗೂ ವೆಬ್‌ತಾಣದ ಮೂಲಕ ಈ ಮಾಹಿತಿ ದೊರೆಯಲಿದೆ ಪುಸ್ತಕರೂಪದಲ್ಲಿಯೂ ಲಭ್ಯವಾಗುವುದರಿಂದ ರಾಜ್ಯದ ಎಲ್ಲ ಕಲಾಪ್ರೇಮಿಗಳಿಗೆ ಉಪಯೋಗವಾಗಲಿದೆ

ಊ) ಉದ್ದೇಶಿತ ರಂಗಮಂದಿರ ನಿರ್ಮಾಣಕ್ಕೆ ರೂ 3 50 ಕೋಟಿ ವೆಚ್ಚ ಬರಲಿದೆ ಸಾರ್ವಜನಿಕರಿಂದ ರೂ 51 00 ಲಕ್ಷ ವಂತಿಗೆಯನ್ನು ಸಂಗ್ರಹಿಸಲಾಗಿರುತ್ತದೆ ಉದ್ದೇಶಿತ ರಂಗಮಂದಿರ ನಿರ್ಮಾಣ ಕಾರ್ಯಕ್ಕೆ ಸರ್ಕಾರದಿಂದ ಈಗಾಗಲೇ ರೂ 18 00 ಲಕ್ಷಗಳ ಧನ ಸಹಾಯವನ್ನು ನೀಡಲಾಗಿದೆ ಪ್ರಸಕ್ತ ಸಾಲಿನಲ್ಲಿಯೂ ಧನ ಸಹಾಯ ನೀಡಲು ಸರ್ಕಾರಕ್ಕೆ ರೂ 2 00 ಲಕ್ಷಗಳ ಮಂಜೂರು ಮಾಡಲು ಪ್ರಸ್ತಾವನೆ ಬಂದಿದ್ದು, ಪರಿಶೀಲನೆಯಲ್ಲಿದೆ ಸಂಪನ್ಮೂಲದ ಕ್ರೋಢೀಕರಣ ಕಾರ್ಯ ನಡೆದಿದ್ದು, ಕಟ್ಟಡದ ಕೆಲಸಗಳನ್ನು ಸದ್ಯದಲ್ಲೆ ಪ್ರಾರಂಭಿಸಲಾಗುವುದು

ಕ್ಯಾರಿ ಓವರ್ ಪದ್ಧತಿ ಅನುಷ್ಠಾನಗೊಳಿಸುವುದು

206 (156) ಶ್ರೀ ಎನ್ ಯೋಗೀಶ್ ಭಟ್ (ಮಂಗಳೂರು) ಮಾನ್ಯ ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕ್ಯಾರಿ ಓವರ್ ಪದ್ಧತಿಯು ರಾಜ್ಯದ ಯಾವ ಯಾವ ವಿಶ್ವವಿದ್ಯಾಲಯಗಳಲ್ಲಿ ಜಾರಿಯಲ್ಲಿದೆ

ಆ) ಈ ಕ್ಯಾರಿಓವರ್ ಪದ್ಧತಿಯ ವೈಶಿಷ್ಟಗಳೇನು, ಇದರ ಲೋಪದೋಷಗಳೇನು ವಿವರ ನೀಡುವುದು,

ಇ) ಈ ಕ್ಯಾರಿಓವರ್ ವ್ಯವಸ್ಥೆಯಿಂದ ವಿದ್ಯಾರ್ಥಿಗಳಿಗಾಗುವ ಪ್ರಯೋಜನಗಳೇನು,

ಈ) ಈ ಪದ್ಧತಿ ಬೇಕೆಂಬ ಬೇಡಿಕ ಮುಂದಿಟ್ಟಿರುವ ವಿಶ್ವವಿದ್ಯಾಲಯ ಯಾವುದು

ಉ) ಸದರಿ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರಕ್ಕಿರುವ ತೊಂದರಗಳೇನು

ಊ) ಇದೇ ರೀತಿ ಹಳೆಯ ಪಠ್ಯಕ್ರಮವನ್ನು ಒದಲಾವಣೆ ಮಾಡಲು ವಿಶ್ವವಿದ್ಯಾಲಯ ಒಪ್ಪಿದೆಯೇ ಮೇಲಿನೆಲ್ಲಾ ನಿಯಮಗಳು ಯಾವಾಗಿನಿಂದ ಜಾರಿಗೆ ಬರುತ್ತದೆ

ಡಾ॥ ಜಿ ಪರಮೇಶ್ವರ್ (ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು)

ಅ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವನ್ನು ಹೊರತುಪಡಿಸಿ, ರಾಜ್ಯ ಹಿಂದುಳಿದ ವಿಶ್ವವಿದ್ಯಾಲಯಗಳಲ್ಲಿ ಕ್ಯಾರಿಓವರ್ ಪದ್ಧತಿಯು ಜಾರಿಯಲ್ಲಿರುತ್ತವೆ?

ಆ) ಕ್ಯಾರಿಓವರ್ ಪದ್ಧತಿಯಿಂದ ವಿದ್ಯಾರ್ಥಿಗಳು ಅನುತ್ತೀರ್ಣರಾದರೂ ಮುಂದಿನ ವರ್ಷಕ್ಕೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ ವಿದ್ಯಾರ್ಥಿಗಳು ಅನುತ್ತೀರ್ಣಗೊಳ್ಳುವ ಪತ್ರಿಕೆಗಳ ಸಂಖ್ಯೆ ಹೆಚ್ಚಾಗುವ ಎಲ್ಲಾ ಸಾಧ್ಯತೆಗಳು ಇರುತ್ತವೆ ಹೀಗಾಗಿ ಹೆಚ್ಚಿನ ವಿಷಯಗಳನ್ನು ನಿಯಮಿತ ಕಾಲದಲ್ಲಿಯೇ ಪಾಸು ಮಾಡುವ ಒತ್ತಡ ಜಾಸ್ತಿಯಾಗುತ್ತದೆ

ಇ) ಕ್ಯಾರಿಓವರ್ ಪದ್ಧತಿಯಿಂದ ಪೂರ್ಣ ಅನುತ್ತೀರ್ಣರಾದಾಗಲೂ ಮುಂದಿನ ವರ್ಷಕ್ಕೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ

ಈ) ಅನ್ವಯಿಸುವುದಿಲ್ಲ

ಉ) ಅನ್ವಯಿಸುವುದಿಲ್ಲ

ಊ) ಸಾಮಾನ್ಯವಾಗಿ ಪ್ರತೀ ಮೂರು ವರ್ಷಗಳಿಗೊಮ್ಮೆ ಪಠ್ಯಕ್ರಮವನ್ನು ಬದಲಾವಣೆ ಮಾಡಲಾಗುತ್ತದೆ

ಔಷಧ ನಿಯಂತ್ರಣ ಇಲಾಖೆಯ ಅವ್ಯವಹಾರ

207 (157) ಶ್ರೀ ಯೋಗೀಶ್ ಭಟ್ ಎಸ್ (ಮಂಗಳೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔಷಧ ನಿಯಂತ್ರಣ ಇಲಾಖೆಯಲ್ಲಿ ಪತ್ತೆಯಾಗಿದ್ದ ಅವ್ಯವಹಾರ ಪ್ರಕರಣವು ಯಾವ ಹಂತದಲ್ಲಿದೆ

ಆ) ಲೋಕಾಯುಕ್ತರು ಶಿಫಾರಸ್ಸು ಮಾಡಿದ ಅಂಶಗಳೇನು

ಇ) ಯಾರು ಯಾರು ತಪ್ಪಿತಸ್ಥರೆಂದು ಗುರುತಿಸಲಾಗಿದೆ ಇವರುಗಳಿಗೆ ಯಾವ ಶಿಕ್ಷೆ ವಿಧಿಸಲಾಗಿದೆ

ಈ) ಲೋಕಾಯುಕ್ತರ ಶಿಫಾರಸ್ಸಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ಹಾಗೂ ವಿಚಾರಣಾ ವರದಿಯನ್ನು ಒದಗಿಸುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಈ ಅವ್ಯವಹಾರದ ಬಗ್ಗೆ ಕೂಲಂಕುಷವಾಗಿ ಇಲಾಖಾ ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿ ನೀಡಲು ಸನ್ಮಾನ್ಯ ಲೋಕಾಯುಕ್ತರಿಗೆ ವಹಿಸಿ ಸರ್ಕಾರದ ಆದೇಶ ಸಂಖ್ಯೆ ಆಕುಕ 279 ಎಂಎಸ್‌ಎ 2003 ದಿನಾಂಕ 13 10 2003ರಂದು ಆದೇಶಿದೆ ವರದಿ ನಿರೀಕ್ಷಿಸಲಾಗಿದೆ

ಆ) ಸನ್ಮಾನ್ಯ ಲೋಕಾಯುಕ್ತರು ತಮ್ಮ ತನಿಖಾ ವರದಿಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ಮೇಲ್ನೋಟಕ್ಕೆ ತಮ್ಮ ಕರ್ತವ್ಯಲೋಪದಿಂದಾಗಿ ಕೆಲಮಟ್ಟದ ಕಲಬೆರಕೆಯ Spurious ಮತ್ತು misbranded ಔಷಧಿಗಳನ್ನು ತಯಾರಕ ರೊಂದಿಗೆ ಶಾಮೀಲಾಗಿ ಮಾರುಕಟ್ಟೆಗೆ ಬಿಡುಗಡೆ